M.V.C.No.476/ 2016 PW -2

ದಿನಾಂಕ 08.08.2019 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಆರ್ 2 ಪರ ಶ್ರೀ ಟಿ.ವಿ.ಆರ್ ಪರ ಶ್ರೀ ಎ.ಸಿ.ಆರ್ ವಕೀಲರಿಂದ :</u>

ನನಗೆ ಈಗ 19 ವರ್ಷ ವಯಸ್ಸಾಗಿದೆ. ನನ್ನ ವಯಸ್ಸಿಗೆ ಸಂಬಂದಪಟ್ಟಂತೆ ಆದಾರ್ ಕಾರ್ಡ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಪಿಯುಸಿ ಓದುತ್ತಿದ್ದೇನೆ. ನಾನು ಕೆ.ಎಸ್.ಆರ್ ಟಿ ಸಿ ಬಸ್ ಚಾಲಕನ ಹುದ್ದೆಗೆ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ನಾನು ಪಿಯುಸಿಯವರೆಗೆ ಓದಿದ್ದೇನೆ ಒಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಮತ್ತು ನನ್ನ ಸ್ನೇಹಿತ ವಿಕಾಸ್ ಅಪಘಾತವಾದಾಗ ಸೈಕಲ್ನಲ್ಲಿ ಹೋಗುತ್ತಿದ್ದೆವು.ಸದರಿ ಸೈಕಲನ್ನು ನಾನು ತುಳಿದುಕೊಂಡು ಹೋಗುತ್ತಿದ್ದೆ. ಅಪಘಾತವಾದ ಸ್ಥಳ ಏರು ರಸ್ತೆಯಾಗಿರುತ್ತದೆ ಎಂದರೆ ಸಾಕ್ಷಿ ತುಂಬಾ ಇಳಿಜಾರು ರಸ್ತೆಯಾಗಿರುತ್ತದೆ ಎಂದು ಹೇಳುತ್ತಾರೆ. ರಸ್ತೆ ತುಂಬಾ ಇಳಿಜಾರಿಯಾಗಿದ್ದ ಕಾರಣ ನಾನು ಸೈಕಲ್ ಅನ್ನು ಸಿತುಂಬಾ ವೇಗವಾಗಿ ಚಲಾಯಿಸಿ ಬಿದ್ದು ಕೊಂಡು ಅಪಘಾತ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳ ದಲ್ಲಿ ತುಂಬಾ ವಾಹನಗಳು ಓಡಾಡುವ ಸ್ಥಳ ಆಗಿದೆ ಎಂದರೆ ಸರಿ. ಸೈಕಲ್ ಅನ್ನು ಕಂಟ್ರೋಲ್ ಮಾಡದೆ ನನ್ನ

ತಪ್ಪಿನಿಂದ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಹೋಗುತ್ತಿರುವಾ ಸ್ಥಳದಲ್ಲಿ ತುಂಬಾ ವಾಹನಗಳು ಹೋಗುತ್ತಿತ್ತು ಎಂದರೆ ಸಾಕ್ಷಿ ನಾವು ಹೋಗುತ್ತಿರುವಾಗ ಬೇರೆ ಯಾವುದೇ ವಾಹನ ಬರುತ್ತಿರಲಿಲ್ಲ ಎಂದು ಹೇಳುತ್ತಾರೆ. ನಾನು ರಸ್ತೆಯ ಎಡಬದಿಯಲ್ಲಿ ಹೋಗುತ್ತಿರುವಾಗ ಹಿಂದಿನಿಂದ ವಾಹನ ಬಂದು ಹೊಡೆದಿದ್ದ ಕಾರಣ ನಾನು ಕೆಳಗೆ ಬಿದ್ದು ಪ್ರಜ್ಞೆ ತಪ್ಪಿದ್ದೆ.

ಈ ಅಪಘಾತ ಆದ 7 ದಿನದ ನಂತರ ದೂರು ನೀಡಿದೆ. ನನಗೆ 7 ದಿನದ ನಂತರ ಪ್ರಜ್ಞೆ ಬಂದಿದ್ದು ಆದ ಕಾರಣ ನನ್ನನ್ನು ಯಾರು ಆಸ್ಪತ್ರೆಗೆ ಸೇರಿಸಿದ್ದರು ಎಂದು ನನಗೆ ಗೊತ್ತಿಲ್ಲ.ಅಪಘಾತದ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಅಪಘಾತ ವಾಹನವನ್ನು ನಾನು ನೋಡಿಲ್ಲ ಎಂದರೆ ಸರಿ. ಕಾರಿನ ಸಂಖ್ಯೆ ಕೆ ಎ 15 ಎಂ 5930 ಕಾರು ಚಾಲಕನ ತಪ್ಪಿನಿಂದ ಈ ಅಪಘಾತ ಉಂಟಾಗದೆ ಇದ್ದರೂ ಸಹ ನಾನು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪಿರ್ಯಾದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿದ ಗಾಯದ ಪ್ರಮಾಣ ಪತ್ರದಂತೆ ನನಗೆ ಯಾವುದೇ ರೀತಿಯ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನಗೆ 2 ಲಕ್ಷ 10 ಸಾವಿರ ಖರ್ಚಾಗಿದ್ದ ಬಗ್ಗೆ ತೋರಿಸಲು ವೈದ್ಯಕೀಯ ಬಿಲ್ಲುಗಳು ಮತ್ತು ಸಲಹಾ ಚೀಟಿಗಳನ್ನು ಹಾಜರು ಪಡಿಸಿರುತ್ತೇನೆ. ನನಗೆ ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಈ ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸಹ ಕಾರಿನ ಚಾಲಕನ ತಪ್ಪಿನಿಂದ ಆಗಿದೆ

ಎಂದು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತದಿಂದ ನನಗೆ ಯಾವುದೇ ರೀತಿಯ ತೊಂದರೆ ಆಗಿಲ್ಲ ಮತ್ತು ನಾನು ಮೊದಲಿನಂತೆ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ,

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಚನ್ನಪಟ್ಟಣ